11

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 12/12/20

# ಗೋಹತ್ಯೆ ನಿಷೇಧ ವಿಧೇಯಕ ಉಳಿಸಿಕೊಳ್ಳಲು ತಂತ್ರ

12/12/20

**ಬೆಂಗಳೂರು:** ರಾಜ್ಯ ವಿಧಾನ ಸಭೆಯಲ್ಲಿ ಅಂಗೀಕೃತಗೊಂಡಿರುವ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ-2020 ವಿಧಾನ ಪರಿಷತ್‌ನಲ್ಲಿ ಅಂಗೀಕಾರ ಕಷ್ಟ ಎಂಬುದನ್ನು ಅರಿತಿದ್ದ ಸರ್ಕಾರ ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ತಂತ್ರ ರೂಪಿಸಿತ್ತು!

ಗುರುವಾರ ವಿಧಾನ ಪರಿಷತ್ ಕಲಾಪದಲ್ಲಿ ಆಡಳಿತ ಪಕ್ಷದವರು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಮಂಡಿಸಿಲ್ಲ. ಬದಲಾಗಿ ಶುಕ್ರವಾರ ಮಂಡಿಸುವುದಾಗಿ ಹೇಳಿ, ಬೇರೆ ವಿಧೇಯಕಗಳನ್ನು ಪಾಸ್ ಮಾಡಿಸಿಕೊಂಡಿದ್ದರು. ಗುರುವಾರ ಸದನದಲ್ಲಿ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ ಮಂಡಿಸಿದ್ದರೆ ಬಹುಮತ ಇಲ್ಲದೇ ಬಿದ್ದು ಹೋಗುವ ಸಾಧ್ಯತೆ ಇತ್ತು ಎನ್ನಲಾಗಿದೆ.

ಅಲ್ಲದೆ, ವಿಧೇಯಕದ ಪರಿಶೀಲನೆಗಾಗಿ ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸುವ ಸಾಧ್ಯತೆಯೂ ಇತ್ತು. ಒಂದೊಮ್ಮೆ ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಿದರೆ, ಮುಂದಿನ 6 ತಿಂಗಳವರೆಗೂ ಸುಗ್ರೀವಾಜ್ಞೆ ಮೂಲಕವೂ ವಿಧೇಯಕವನ್ನು ಕಾಯ್ದೆಯಾಗಿ ಜಾರಿಗೆ ತರಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ, ಮುಂದಿನ ಅಧಿವೇಶನದಲ್ಲಿ ಪುನರ್ ಮಂಡಿಸುವುದು ಕಷ್ಟವಾಗಿತ್ತು. ಹೀಗಾಗಿಯೇ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ಬೇಕಾದ ಎಲ್ಲ ತಂತ್ರಗಾರಿಕೆಯನ್ನು ಆಡಳಿತ ಪಕ್ಷ ಮಾಡಿದೆ ಎಂದು ಬಿಜೆಪಿಯ ಹಿರಿಯ ಸದಸ್ಯರೊಬ್ಬರು ಮಾಹಿತಿ ನೀಡಿದರು.

ಪರಿಷತ್ ಕಲಾಪದ ಸಂದರ್ಭದಲ್ಲಿ ಪ್ರತಿಪಕ್ಷದ ಒತ್ತಾಯದಂತೆ ಸಭಾಪತಿಯವರು ಸುಲಭವಾಗಿ ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸುವ ಸಾಧ್ಯತೆ ಹೆಚ್ಚಿತ್ತು. ಹೀಗೆ ಮಾಡಿದ್ದರೆ, ಸುಗ್ರೀವಾಜ್ಞೆ ಮೂಲಕವೂ ವಿಧೇಯಕ ಜಾರಿಗೆ ತರುವುದು ಇನ್ನಷ್ಟು ವಿಳಂಬವಾಗುತಿತ್ತು. ಹೀಗಾಗಿಯೇ ಗುರುವಾರ ಅವಕಾಶವಿದ್ದರೂ ಮಸೂದೆಯನ್ನು ಮಂಡಿಸಿರಲಿಲ್ಲ. ಆದರೂ, ಶುಕ್ರವಾರ ಕಲಾಪ ನಡೆಯಬಹುದು ಎಂದು ಊಹಿಸಿದ್ದೆವು. ಆದರೆ, ಸಭಾಪತಿಯವರು ಏಕಾಏಕಿ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದಾರೆ. ಹೀಗಾಗಿ ಸುಗ್ರೀವಾಜ್ಞೆ ಮೂಲಕ ವಿಧೇಯಕವನ್ನು ಜಾರಿಗೆ ತರಲಿದ್ದೇವೆ ಎಂದು ಇನ್ನೊಬ್ಬ ಸದಸ್ಯರು ಮಾಹಿತಿ ನೀಡಿದರು.

## ಮಸೂದೆಯಿಂದ ಬಹುತೇಕರಿಗೆ ಖುಷಿಯಾಗಿದೆ

**ಬೆಂಗಳೂರು :** ಕರ್ನಾಟಕ ಜಾನುವಾರ ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದ್ದರಿಂದ ರಾಜ್ಯದ ಬಹುತೇಕ ಜನರಿಗೆ ಖುಷಿಯಾಗಿದೆ ಎಂದು ಸಿಎಂ ಯಡಿಯೂರಪ್ಪ ಹೇಳಿದರು.

ಶುಕ್ರವಾರ ತಮ್ಮ ನಿವಾಸದಲ್ಲಿ ಗೋಪೂಜೆ ನೆರವೇರಿಸಿ ಮಾತನಾಡಿ, ಗೋ ಹತ್ಯೆ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ. ಗೋ ರಕ್ಷಣೆಗಾಗಿ ಅಗತ್ಯವಿರುವ ಕಡೆ ಗೋವುಗಳನ್ನು ಸಾಕಲು ವ್ಯವಸ್ಥೆ ಮಾಡಲಿದ್ದೇವೆ. ಈ ವಿಧೇಯಕದಿಂದ ರಾಜ್ಯದ ಬಹುತೇಕರಿಗೆ ಖುಷಿಯಾಗಿದೆ ಎಂದರು.

**ಸುಗ್ರೀವಾಜ್ಞೆ ತರಲಿದ್ದೇವೆ :** ಚುನಾವಣಾ ಪ್ರಣಾಳಿಕೆಯಲ್ಲಿಯೂ ಈ ಬಗ್ಗೆ ಹೇಳಿದ್ದೆವು. ಈ ಹಿಂದೆ ಜಾರಿಗೆ ತಂದಿದ್ದರೂ, ಅಂದಿನ ರಾಜ್ಯಪಾಲರು ಬೇರೆ ಕಾರಣಗಳಿಗಾಗಿ ಅಂಗೀಕರಿಸಿರಲಿಲ್ಲ. ವಿಧಾನ ಪರಿಷತ್‌ನಲ್ಲಿ ಸಭಾಪತಿ ಸಹಕಾರ ನೀಡದೇ ಇರುವುದರಿಂದ ಸುಗ್ರೀವಾಜ್ಞೆ ಮೂಲಕ ಕಾಯ್ದೆ ತರಲಿದ್ದೇವೆ ಎಂದರು.

ಮಂಗಳವಾರ ಮತ್ತೊಮ್ಮೆ ಅಧಿವೇಶನ ಕರೆಯಲು ಸೂಚನೆ ನೀಡಿದ್ದೇವೆ. ಏಕಾಏಕಿ ಅಧಿವೇಶನ ಮುಂದೂಡುವ ಅಧಿಕಾರ ಸಭಾಪತಿಯವರಿಗೆ ಇಲ್ಲ. ರಾಜ್ಯಪಾಲರಿಗೂ ಈ ವಿಷಯ ತಿಳಿಸಿದ್ದೇವೆ ಎಂದರು.